ಕರ್ನಾಟಕ ಪರೀಕ್ಷಾ ಪ್ರಾಧಿಕಾರ
KARNATAKA EXAMINATIONS AUTHORITY

No. ED/KEA/Press Note/2016 Date: 04-10-2016

PRESS NOTE

**CET-2016 – Schedule for Entry of Options for online allotment of seats to Ayurveda, Homoeopathy, Unani, Naturopathy & Yoga and Farm Science courses**

KEA is conducting online seat allotment to Ayurveda, Homoeopathy, Unani, Naturopathy & Yoga, Agriculture, Veterinary courses for the year 2016. Option entry will be enabled from 7.00 pm on 04-10-2016 to 11.00 am on 06-10-2016. The eligible ISM & H rank holders and Farm Science rank holders can participate in this round as per the following schedule if they are interested.

Candidates are here by informed to visit KEA Website http://kea.kar.nic.in for more details.

**ಸಿಇಟಿ-2016 – ಆಯುರ್ವೇದ, ಹೋಮಿಯೋಪತಿ, ಯುನಾನಿ, ನ್ಯಾಚುರೋಪತಿ ಮತ್ತು ಯೋಗ ಹಾಗು ಕೃಷಿ ವಿಜ್ಞಾನ ಮತ್ತು ವೆಟರಿನರಿ ಕೋರ್ಸುಗಳ ಆನ್‌ಲೈನ್ ಸೀಟು ಹಂಚಿಕೆಗಾಗಿ ಆಯ್ಕೆ ದಾಖಲಿಸಲು ವೇಳಾಪಟ್ಟಿ**

ಪ್ರಾಧಿಕಾರವು 2016ನೇ ಸಾಲಿನ ಆಯುರ್ವೇದ, ಹೋಮಿಯೋಪತಿ, ಯುನಾನಿ, ನ್ಯಾಚುರೋಪತಿ ಮತ್ತು ಯೋಗ ಹಾಗು ಕೃಷಿ ವಿಜ್ಞಾನ, ವೆಟರಿನರಿ ಕೋರ್ಸುಗಳಿಗೆ ಆನ್‌ಲೈನ್ ಮುಖಾಂತರ ಸೀಟು ಹಂಚಿಕೆಯನ್ನು ಮಾಡಲಾಗುವುದು. ದಿನಾಂಕ 04-10-2016 ರ ಸಂ. 7.00 ಗಂಟೆಯಿಂದ 06-10-2016ರ ಬೆ.11.00 ಗಂಟೆಯವರೆಗೆ ಅರ್ಹ ಅಭ್ಯರ್ಥಿಗಳು ಈ ಮೇಲಿನ ಕೋರ್ಸುಗಳಿಗೆ ಇಚ್ಛೆ / ಆಯ್ಕೆಯನ್ನು ದಾಖಲಿಸಬಹುದಾಗಿದೆ. ಐಎಸ್‌ಎಂಹೆಚ್ ರ್‍ಯಾಂಕ್ ಮತ್ತು ಫಾಮ್ ಸೈನ್ಸ್ ರ್‍ಯಾಂಕ್ ಹೊಂದಿರುವ ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಈ ಕೆಳಗಿನ ವೇಳಾಪಟ್ಟಿಯಂತೆ ಭಾಗವಹಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಕೋರಿದೆ.

**Option Entry Schedule**

| Sl. No. | Particulars | Date and Time |
|---|---|---|
| 01 | Display of Seat Matrix | 04-10-2016 after 6.00 pm |
| 02 | Option Entry by Eligible Candidates (Please read Brochure for details) | From 7.00 pm on 04-10-2016 to 06-10-2016 up to 11.00 am |
| 03 | Publication of Seat Allotment Results | 06-10-2016 after 1.00 pm |
| 04 | Confirmation of Allotment, Payment of Fees and downloading of admission order | 07-10-2016 |
| 05 | Last date for reporting to colleges | 13-10-2016 |

ಈ ಮೇಲ್ಕಂಡ ಪತ್ರಿಕಾ ಪ್ರಕಟಣೆಯನ್ನು ಅಭ್ಯರ್ಥಿಗಳ ಹಿತದೃಷ್ಟಿಯಿಂದ ತಮ್ಮ ದಿನಪತ್ರಿಕೆಯಲ್ಲಿ ಪ್ರಾಮುಖ್ಯವಾಗಿ ಪ್ರಕಟಿಸಲು ಕೋರಿದೆ.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
18th Cross, Sampige Road, Malleshwaram, Bangalore – 560 012.
Phone: 080-2356 4583, 2336 1786, Fax: 080-2346 1576
Website : http://kea.kar.nic.in e-mail : keauthority-ka@nic.in

## CET-2016 – Important Instructions –AYUSH (ISMH) / Agriculture / Veterinary (Farm Science) Seat allotment

### Option Entry Schedule

No. ED/KEA/ADMN/CR-22/2015-16 Date: 04-10-2016

ISMH, Agriculture and Veterinary seats which are canceled / newly added / identified as not reported if any, will be offered in this round to the eligible candidates as per the following schedule. College wise, Category Wise and Course wise detailed Seat Matrix is hosted on the KEA Website http://kea.kar.nic.in along with the fee structure. In addition to the above mentioned seats, the AYUSH, Agriculture and Veterinary consequential seats which may arise during the seat allotment will also be offered in this round. Interested eligible candidates can exercise their options afresh as per the schedule to become eligible for allotment of seats in the order of merit.

**NOTE:**

1. The candidates who have selected seat, not selected any seat, selected and reported to the college, candidates who have cancelled their seats are eligible to participate in this round.
2. In this round candidates have to enter their priority of options afresh. (Fresh Option Entry)
3. Candidates are advised to enter the options they want to select whether the seats shown in the seat matrix or not, only for the reason that ISMH / Agriculture / Veterinary consequential vacancies may arise during allotment process and the candidates will have a chance of getting a better seat if they have entered the options.
4. Candidates who have selected seat and reported to the colleges are also eligible to participate in this round.
5. Candidates who are already admitted to colleges are advised to attend this round **only if they are interested** and after confirming of getting the original documents within the stipulated time from the present college. The seat selected by the candidates in any discipline will get cancelled automatically upon selection of a seat in this round and for any reason they will not get back the old seat but to compulsorily join the allotted colleges.
6. The responsibility of obtaining the original documents from the present college for admitting to the newly allotted college within the stipulated date and time solely lies with the candidates.
7. ***Please note that if any seat is allotted in this round as per merit and options entered by the candidate, there is no chance of getting back the earlier allotted seat.***
8. All other guidelines and procedures given in the CET-2016 brochure remain same for all other purposes.

**CAUTION:** The candidates who are admitted to the college and pursuing their studies in the college are here by informed to participate in this round in consultation with their parents and only if they are interested in AYUSH / Agriculture / Veterinary courses. The seat held by them will get cancelled automatically upon selection of a seat in this round and for any reason **they will not be eligible to continue in the college** allotted to them in the earlier rounds. Candidates have to compulsory report to the allotted college on or before the last date prescribed and if a candidate fails to report to the allotted college they will not be having any seat in their favour; they will lose both the seats and fee will not be refunded. **After the seat allotment in this round candidate has to compulsorily report to the allotted college.**

Executive Director

**ಸಿಇಟಿ-2016 – ವೈದ್ಯಕೀಯ / ದಂತವೈದ್ಯಕೀಯ / ಆಯುಷ್ / ಕೃಷಿ / ವೆಟರಿನರಿ – ಸೀಟು ಹಂಚಿಕೆ ಸೂಚನೆಗಳು**

ಆಯ್ಕೆ ದಾಖಲಿಸುವ ವೇಳಾಪಟ್ಟಿ

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.22/2015-16 ದಿನಾಂಕ: 04-10-2016

ಈ ಸುತ್ತಿನಲ್ಲಿ, ರದ್ದುಪಡಿಸಿಕೊಂಡಿರುವ / ಹೊಸದಾಗಿ ಸೇರ್ಪಡೆಯಾದ / ಕಾಲೇಜಿಗೆ ಪ್ರವೇಶ ಪಡೆಯದೆ ಇರುವ (if any) ಆಯುಷ್, ಕೃಷಿ ವಿಜ್ಞಾನ, ವೆಟರಿನರಿ ಸೀಟುಗಳು ಸೀಟುಗಳನ್ನು 2016ನೇ ಸಾಲಿನಲ್ಲಿ ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳಿಗೆ ಈ ಸುತ್ತಿನಲ್ಲಿ ವೇಳಾಪಟ್ಟಿಯಂತೆ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. ಕಾಲೇಜುವಾರು, ಕೋರ್ಸುವಾರು ಮತ್ತು ಕ್ಯಾಟಗರಿವಾರು ವಿವರಗಳುಳ್ಳ ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಶುಲ್ಕದ ವಿವರಗಳೊಂದಿಗೆ ಪ್ರಕಟಿಸಲಾಗಿದೆ. ಈ ಮೇಲೆ ತಿಳಿಸಿರುವ ಸೀಟುಗಳ ಜೊತೆಯಲ್ಲಿ ಸೀಟು ಹಂಚಿಕೆಯ ಸಂದರ್ಭದಲ್ಲಿ ಆಗಿಂದಾಗ್ಗೆ ಉದ್ಭವಿಸುವ ಆಯುಷ್, ಕೃಷಿ ವಿಜ್ಞಾನ ಮತ್ತು ವೆಟರಿನರಿ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು. ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಕೆಳಗಿನ ವೇಳಾಪಟ್ಟಿಯಂತೆ ಹೊಸದಾಗಿ ಇಚ್ಛೆ / ಆಯ್ಕೆಯನ್ನು ದಾಖಲಿಸಿ ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.

**ಸೂಚನೆ:**

1. ಸೀಟನ್ನು ಆಯ್ಕೆ ಮಾಡಿಕೊಂಡವರು, ಸೀಟನ್ನು ಆಯ್ಕೆ ಮಾಡಿಕೊಳ್ಳದವರು, ಸೀಟು ಆಯ್ಕೆ ಮಾಡಿ ಕಾಲೇಜಿಗೆ ಪ್ರವೇಶ ಪಡೆದವರು, ಸೀಟನ್ನು ರದ್ದುಪಡಿಸಿಕೊಂಡವರು ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.
2. ಈ ಸುತ್ತಿನಲ್ಲಿ ಅಭ್ಯರ್ಥಿಗಳು ಫಾರ್ಮ್ ಕೋರ್ಸುಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಅನ್ನು ದಾಖಲಿಸಬೇಕು.
3. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸೀಟುಗಳ ಲಭ್ಯತೆ ಇಲ್ಲದಿದ್ದರೂ ಸಹ ಅಭ್ಯರ್ಥಿಗಳು ಆದ್ಯತೆಗಳನ್ನು ಸೇರಿಸಬಹುದು ಯಾಕೆಂದರೆ ಸೀಟು ಹಂಚಿಕೆಯ ಕಾರ್ಯದಲ್ಲಿ ಉದ್ಭವಿಸುವ ಆಯುಷ್ / ಕೃಷಿ ವಿಜ್ಞಾನ / ವೆಟರಿನರಿ ಕೋರ್ಸುಗಳ ಸೀಟುಗಳನ್ನೂ ಸಹ ಹಂಚಿಕೆ ಮಾಡಲಾಗುವುದು.
4. ಈಗಾಗಲೇ ಸೀಟನ್ನು ಪಡೆದು ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳೂ ಸಹ ಈ ಸುತ್ತಿನಲ್ಲಿ ಭಾಗವಹಿಸಬಹುದು.
5. ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು, ಈ ಮೇಲ್ಕಂಡ ಕೋರ್ಸುಗಳಿಗೆ ಆಸಕ್ತಿ ಇದ್ದರೆ ಮಾತ್ರ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟು ತನ್ನಷ್ಟಕ್ಕೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಆ ಸೀಟುಗಳನ್ನು ಹಿಂಪಡೆಯಲು ಸಾಧ್ಯವಾಗುವುದಿಲ್ಲ ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು.
6. ಆದರೆ ಪ್ರವೇಶ ಪಡೆದಿರುವ ಕಾಲೇಜುಗಳಿಂದ ಮೂಲ ದಾಖಲೆಗಳನ್ನು ಪಡೆದು ಹೊಸದಾಗಿ ಹಂಚಿಕೆಯಾಗುವ ಕಾಲೇಜುಗಳಿಗೆ ನಿಗದಿತ ಸಮಯದಲ್ಲಿ ನೀಡಿ ಪ್ರವೇಶ ಪಡೆಯುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
7. ***ಮೆರಿಟ್ ಆಧಾರದ ಮೇಲೆ ಹಾಗೂ ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಯನ್ನು ಪರಿಗಣಿಸಿ ಸೀಟು ಹಂಚಿಕೆಯಾಗುವುದರಿಂದ ಯಾವುದೇ ಕಾರಣಕ್ಕೂ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟನ್ನು ಹಿಂಪಡೆಯಲಾಗುವುದಿಲ್ಲ.***
8. ಸಿಇಟಿ-2016 ರ ಬ್ರೋಚರನಲ್ಲಿ ನೀಡಿರುವ ಇತರೆ ಮಾರ್ಗದರ್ಶನಗಳು ಮತ್ತು ಕಾರ್ಯವಿಧಾನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ವಿಶೇಷ ಸೂಚನೆ:** ಈಗಾಗಲೆ ಸೀಟನ್ನು ಪಡೆದು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಭಾಗವಹಿಸುವ ಮೊದಲು ಪೋಷಕರೊಡನೆ ಚರ್ಚಿಸಿ ಯೋಚಿಸಿ **ವೈದ್ಯಕೀಯ / ದಂತವೈದ್ಯಕೀಯ / ಆಯುಷ್ / ಕೃಷಿ ವಿಜ್ಞಾನ / ವೆಟರಿನರಿ** ಕೋರ್ಸುಗಳಲ್ಲಿ ಇಷ್ಟವಿದ್ದಲ್ಲಿ ಮಾತ್ರ ಭಾಗವಹಿಸಲು ಕೋರಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದಲ್ಲಿ, ಮೊದಲು ಪ್ರವೇಶ ಪಡೆದಿದ್ದ ಕಾಲೇಜಿನ ಸೀಟು ತಂತಾನೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ ಅಂತಹ ಅಭ್ಯರ್ಥಿಗಳು ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿನಲ್ಲಿ ನಿಗದಿತ ದಿನಾಂಕದೊಳಗೆ ಪ್ರವೇಶವನ್ನು ಪಡೆಯಲೇಬೇಕು. ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯದಿದ್ದಲ್ಲಿ ಅಭ್ಯರ್ಥಿಯು ಎರಡೂ ಕಡೆ ಸೀಟು ಕಳೆದುಕೊಳ್ಳುತ್ತಾನೆ ಯಾವುದೇ ಸೀಟನ್ನು ಹೊಂದಿರುವುದಿಲ್ಲ ಹಾಗು ಯಾವುದೇ ಫೀ ಮರು ಪಾವತಿ ಮಾಡುವುದಿಲ್ಲ. ಈ ಸುತ್ತಿನಲ್ಲಿ ಹಂಚಿಕೆಯಾದ ನಂತರ ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು.

ಕಾರ್ಯನಿರ್ವಾಹಕ ನಿರ್ದೇಶಕರು